ಆತ್ಮವಂಚನೆ ಮಾಡಿಕೊಂಡು. ಹಾಗೆ ಇರಲು ಹೇಗೆ ಸಾಧ್ಯ ಅಂತ ಅಶ್ವಿನಿಗೆ ಅನ್ನಿಸ್ತಿತ್ತು.

***

'ಅಶ್ವಿನಿಗೆ ಇನ್ನೊಂದು ಮದುವೆ ಮಾಡಲ್ವ ಅಂತ ನಮ್ಮವರೇ ಕೇಳ್ತಾರೆ. ಅವರಿಗೆ ಏನು ಉತ್ತರ ಹೇಳಲಿ? ನಂಗೆ ಹರ್ಟ್ ಮಾಡಬೇಕು ಅಂತಲೇ ಏನೇನೋ ಕೇಳ್ತಾರೆ. ನಾನು ಸುಮ್ಮನಿದ್ದರೆ ಅವರ ಪ್ರಶ್ನೆಗೆ ಅವರೇ ಉತ್ತರ ಹೇಳ್ತಾರೆ...'

'ನೀವು ಬದುಕಿರೋವರೆಗೆ ಪರವಾಗಿಲ್ಲ. ಆಮೇಲೆ ಮಗಳ ಗತಿ ಏನು ಅನ್ನೋದನ್ನು ಯೋಚನೆ ಮಾಡಿ ಅಂತಾರೆ. ಇಂಥ ಮಾತುಗಳನ್ನು ಕೇಳಿದಾಗ ಭಯವಾಗುತ್ತೆ ಮಗಳೇ' ಅಂತ ಅಪ್ಪ ಹೇಳಿಕೊಂಡು ಸ್ವಲ್ಪ ಹೊತ್ತು ಸುಮ್ಮನೆ ಕೂತು ಬಿಡುತ್ತಿದ್ದರು. ಮಗಳ ಜೀವನ ಅತಂತ್ರ ಆಗುತ್ತೆ ಅನ್ನೋ ಭಯ ಅಪ್ಪನಿಗೆ. ಇನ್ನೊಂದು ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವ ಆತುರ. ಇನ್ನೊಂದು ಮದುವೆ ಮಾಡಿಕೊಂಡರೆ ಅವಳ ಜೀವನ ಚೆನ್ನಾಗಿರಬಹುದು ಅನ್ನೋ ಆಸೆ. ಆದರೆ, ಅದನ್ನು ನೇರವಾಗಿ ಹೇಳಲು ಹಿಂಜರಿಕೆ.

ಒಂದು ದಿನ ಅಪ್ಪ, ನಮ್ಮವರ ನಡುವೆ ಇದ್ದುಕೊಂಡು ಅವರ ಮಾತುಗಳನ್ನು ಕೇಳಿಸಿಕೊಳ್ಳೋ ಬದಲು ಎಲ್ಲಿಗಾದರೂ ಓಡಿ ಹೋಗಬೇಕು ಅನ್ನುತ್ತೆ ಅಂದರು. ಅವರ ಮಾತನ್ನು ಅಶ್ವಿನಿ ಗಂಭೀರವಾಗಿ ತೆಗೆದುಕೊಂಡಳು. ಈ ಊರು ಬಿಟ್ಟು ಬೇರೆಲ್ಲಿಗಾದರೂ ಹೋದರೆ ಸರಿ ಹೋಗಬಹುದು ಅನ್ನಿಸಿತು. ಹೊಸ ಊರಲ್ಲಿ ಹೇಗಿದ್ದರೂ ನಡೆಯುತ್ತೆ ಅಂತ ಅನ್ನಿಸಿದ್ದೇ ತಡ, ಕೆಲಸಕ್ಕೆ ರಾಜೀನಾಮೆ ಕೊಟ್ಟಳು.

'ಪ್ರಪಂಚ ವಿಶಾಲವಾಗಿದೆ. ನಮ್ಮವರು ಇಲ್ಲದ ಊರಿಗೆ ಹೋಗೋಣ. ನೀವು ನನ್ನ ಜತೆ ಬಂದರೆ ಸಾಕು ನಾನು ಹೊಸ ಬದುಕು ಹೇಗೆ ಕಟ್ಟಿಕೊಳ್ತೀನಿ ಅನ್ನೋದನ್ನು ನೋಡಿ...' ಅಂತ ಅಪ್ಪ, ಅಮ್ಮನನ್ನು ಕರೆದುಕೊಂಡು ಈ ಸಿಟಿಗೆ ಬಂದಳು.

ಪ್ರತಿದಿನ, ಪ್ರತಿಕ್ಷಣ ಅಪರಿಚಿತರಂತೆ ಇದ್ದು ಬಿಡುವಂಥ ಮನಸ್ಥಿತಿಯ ಸಿಟಿ ಜನರ ನಡುವೆ ಬದುಕೋದು ಚೆಂದ ಅನ್ನಿಸಿತ್ತು ಹೊಸದರಲ್ಲಿ. ಆಮೇಲೆ ಇಲ್ಲಿಯೂ ಜನ ಸರಿ ಇಲ್ಲ ಅಂತ ಅನ್ನಿಸೋಕೆ ಶುರುವಾಯಿತು. ಹಳ್ಳಿ, ಟೌನು, ಸಿಟಿ ಎಲ್ಲ ಕಡೆಯೂ ಜನ ಇರೋದೇ ಹೀಗೆ. ಮೇಲುನೋಟಕ್ಕೆ ನಿರ್ಲಿಪ್ತರಂತೆ ಕಾಣ್ತಾರೆ. ಎಲ್ಲರೂ ಮುಖವಾಡ ಹಾಕಿಕೊಂಡು ಬದುಕ್ತಿದ್ದಾರೆ! ಎಲ್ಲರಿಗೂ ಎಂಥದೋ ಕುತೂಹಲ. ಇವಳಿಗೆ ಮದುವೆ ಆಗಿದೆಯೋ ಅಥವಾ ಗಂಡನನ್ನು ಬಿಟ್ಟಿದ್ದಾಳೊ ಅನ್ನೋದನ್ನು ತಿಳಿದುಕೊಳ್ಳೋ ಕುತೂಹಲ. ಪಕ್ಕದ ಮನೆ ಹೆಂಗಸು ಇದಕ್ಕೆ ತದ್ವಿರುದ್ಧ. ಅವಳು ಲಿವಿಂಗ್ ರಿಲೇಷನ್‌ನಲ್ಲಿ ಇದ್ದಾಳಂತೆ! ಗಂಡು, ಹೆಣ್ಣಿನ ಸಂಬಂಧಕ್ಕೆ ಯಾವ ಕಟ್ಟುಪಾಡೂ ಇಲ್ಲ ಅನ್ನೋದರ ರೂಪಕದಂತೆ. ಅವಳಂಥವರು ಈ ಸಿಟಿಯಲ್ಲಿ ಬೇಕಾದಷ್ಟು ಜನ ಇದ್ದಾರಂತೆ! ಲಿವಿಂಗ್ ರಿಲೇಷನ್ ಅನ್ನೋ ಸಂಬಂಧವನ್ನು ಈ ಸಿಟಿ ಜನ ಒಪ್ಪಿಕೊಂಡಿದ್ದಾರೆ. ಅವಳು ದಾರಿ ಬಿಟ್ಟಿದ್ದಾಳೆ ಅಂತಾಗಲೀ, ಹಾದರ ಮಾಡ್ತಿದ್ದಾಳೆ ಅಂತಾಗಲಿ ಈ ಜನಕ್ಕೆ ಅನ್ನಿಸಿಲ್ಲ. ಅನ್ನಿಸಿದರೂ ಯಾರಿಗೂ ಬಾಯಿ ಬಿಟ್ಟು ಹೇಳುವ ಧೈರ್ಯ ಇಲ್ಲ. ಅವಳೂ ಅಷ್ಟೇ ಯಾರಿಗೂ ಕೇರ್ ಮಾಡಲ್ಲ! ಅವಳ ಜತೆ ಇರೋನು ಬುದ್ಧಿಜೀವಿಯಂತೆ ಕಾಣ್ತಾನೆ. ಆದರೆ, ಮಾನಸಿಕವಾಗಿ ಕೊಳಕ. ಅವನ ಕಣ್ಣುಗಳು ಸದಾ ಹೆಂಗಸರ ಮೈಮೇಲೆ ಹರಿದಾಡ್ತವೆ ಅನ್ನೋದನ್ನು ಅಶ್ವಿನಿ ಗಮನಿಸಿದ್ದಳು. ಆದರೆ, ಅವನೂ ಸಭ್ಯನ ಮುಖವಾಡ ಹಾಕಿಕೊಂಡಿದ್ದಾನೆ!

ಇದು ಪ್ರತಿಷ್ಠಿತರ ಬಡಾವಣೆಯಂತೆ. ಆದರೆ, ಯಾರೂ ಪ್ರತಿಷ್ಠಿತರಂತೆ ಕಾಣಲ್ಲ. ಎಲ್ಲರೂ ಮಾನಸಿಕ ರೋಗಿಗಳೇ. ಎಲ್ಲರೂ ಮುಖವಾಡ ಹಾಕಿಕೊಂಡು ಬದುಕ್ತಿದ್ದಾರೆ ಅಂತ ಅಶ್ವಿನಿಗೆ ಸ್ಪಷ್ಟವಾಗಿತ್ತು. ಎಲ್ಲರನ್ನೂ ಸೂಕ್ಷ್ಮವಾಗಿ ಗಮನಿಸಿದ ಮೇಲೆ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ನಿರ್ಲಿಪ್ತಳಂತೆ ಇದ್ದು ಬಿಡುವ ನಿರ್ಧಾರ ಮಾಡಿ ನಿರಾಳವಾದಳು.

***



ಮೊದಲು ಒಂದು ಕೆಲಸ ಹಿಡೀಬೇಕು. ಹೆಂಗಸು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರೆ ಒಂಟಿಯಾಗಿದ್ದರೂ ನಡೆಯುತ್ತೆ. ಮತ್ತೆ ಕವಿತೆ, ಕಥೆ ಬರೆಯಬೇಕು. ಬರೆಯಲು ಬೇಕಾದಷ್ಟು ವಿಷಯಗಳಿವೆ. ಮೊದಲು ಸ್ವಂತದ್ದೊಂದು